**CW : 20**
PW :7

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.1577/2025

ಸಾಕ್ಷಿದಾರರ ಹೆಸರು : ಶ್ರೀ ರಾಧಾಕೃಷ್ಣ ಕೆ

ತಂದೆಯ ಹೆಸರು : ವೆಂಕಪ್ಪ

ಪ್ರಾಯ : 44 ವರ್ಷ

ಉದ್ಯೋಗ ಪೊ. ಮುಖ್ಯ ಪೇದೆ, ಪುತ್ತೂರು ಗ್ರಾ. ಪೊ. ಠಾಣೆ

ವಾಸಸ್ಥಳ : ಸಂಪ್ಯ

ದಿನಾಂಕ: **07.05.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ನಾನು 28-05-2024 ರಿಂದ ಪ್ರಸ್ತುತವೂ ಸಹ ಪುತ್ತೂರು ಗ್ರಾಮಾಂತರ ಪೋ ಠಾಣೆಯಲ್ಲಿ ಪೊ. ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ.17-04-2025 ರಂದು ಪುತ್ತೂರು ಗ್ರಾಮಾಂತರ ಪೋ. ಠಾಣೆಯ ಹಗಲು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಸಂ.4.30ರ ಸಮಯ ಚಾಸಾ21ರವರು ಚಾಸಾ22ರವರು ಸ್ವೀಕರಿಸಿಕೊಂಡಿದ್ದ ದೂರನ್ನು ಠಾಣೆಗೆ ಹಾಜರಾಗಿ ನನಗೆ ನೀಡಿದ ನಂತರ ಅದನ್ನು ಸ್ವೀಕರಿಸಿ ನಮ್ಮ ಠಾಣಾ ಯುಡಿಆರ್ ಸಂ.21/2025 ರಂತೆ ನೊಂದಾಯಿಸಿಕೊಂಡು ಪ್ರವವ ವರದಿ ತಯಾರಿಸಿ ಚಾಸಾ18 ರವರ ಮುಖಾಂತರ ಉಪವಿಭಾಗಾಧಿಕಾರಿ ಪುತ್ತೂರು ರವರಿಗೆ ಕಳುಹಿಸಿಕೊಟ್ಟಿರುತ್ತೇನೆ.

ನಾನು ಸ್ವೀಕರಿಸಿದ್ದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರಿನ ಯಥಾ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ20 ಎಂದು ಗುರುತಿಸಲಾಗಿದೆ. ಸಾಕ್ಷಿಯು ಯುಡಿಆರ್ ನಂ 21/2025ರ ಪ್ರವವ ನೋಡಿ ಗುರುತಿಸಿದ್ದು ಅದನ್ನು ನಿಪಿ22 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ22ಎ ಎಂದು ಗುರುತಿಸಲಾಯಿತು.

**CW : 20**
PW :7

<u>ಪಾಟೀ ಸವಾಲುಃ ಆರೋಪಿತರ ಪರ ಎ ಡಿ ಆರ್ ವಕೀಲರಿಂದಃ</u>

ನಿಪಿ20 ಮತ್ತು 22 ದಾಖಲೆಯನ್ನು ನಾನು ನೊಂದಾಯಿಸಿದ ಮಾನ್ಯ ಉಪವಿಭಾಗಾಧಿಕಾರಿಯವರು ಹಾಗೂ ತಾಲೂಕು ದಂಡಾಧಿಕಾರಿರವರಿಗೆ ಕಳುಹಿಸಿಕೊಟ್ಟಿರುತ್ತೇನ. ಅವುಗಳ ಮೂಲ ದಾಖಲೆಯನ್ನು ಮಾನ್ಯ ಉಪವಿಭಾಗಾಧಿಕಾರಿಯವರು ಹಾಗೂ ತಾಲೂಕು ದಂಡಾಧಿಕಾರಿರವರಿಗೆ ಕಳುಹಿಸಿಕೊಟ್ಟಿರುತ್ತೇನ. ನಿಪಿ20 ದೂರನ್ನು ನನಗೆ ಚಾಸಾ22ರವರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಪಿ20ನ್ನು ಠಾಣೆಯಲ್ಲಿ ತಯಾರಿಸಿ ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.